ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಅ) ಶ್ರೀಗಂಧದ ಪ್ರಕರಣಕ್ಕೆ ಸಂಬಂಧಿಸಿದಂತೆ ಉಡುಪಿ ಜಿಲ್ಲೆಯಲ್ಲಿ ಬಂಧಿಸಿದ ಶ್ರೀಗಂಧ ಕಳ್ಳ ಸಾಗಾಣಿಕೆದಾರರ ಸಂಖ್ಯೆ ಈ ಕೆಳಗಿನಂತಿದೆ.

ವರ್ಷ	2001–02	2002–03	2003–04	2004–05
ಆರೋಪಿಗಳ ಸಂಖ್ಯೆ	30	23	54	71
ಆ) ಪ್ರಮಾಣ ಕೆಜಿಗಳಲ್ಲಿ	990.75	593.10	954.801	987.783

ಇ) ಶ್ರೀಗಂಧವು ಸರ್ಕಾರದ ಸೊತ್ತಾಗಿರುವುದರಿಂದ, ಅರಣ್ಯ ತಕ್ಷೀರು ಪ್ರಕರಣಗಳಲ್ಲಿ ವಶಪಡಿಸಿಕೊಂಡ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಂಡು ಶ್ರೀಗಂಧದ ಕೋಠಿಗೆ ಸಾಗಿಸಲಾಗುತ್ತಿದೆ.

ಈ) ಈ ವಿಭಾಗದ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಇಂತಹ ಪ್ರಕರಣಗಳು ಇರುವುದಿಲ್ಲ. ಆದರೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 72ಎ ಗೆ ಸಂಬಂಧಿಸಿದಂತೆ ಪತ್ತೆ ಹಚ್ಚಿದ ಹೆಬ್ರಿ ವಲಯ ಅರಣ್ಯ ತಕ್ಷೀರು ಸಂಖ್ಯೆ: 37/04–05, ದಿನಾಂಕ: 09.12.2004 ರಲ್ಲಿ ಶ್ರೀ ಶಂಕರ ಬಿನ್ ಕಡ್ತಿರ, ಪೋಲೀಸ್ ಪೇದೆ ಸಂಖ್ಯೆ: 2042, ಕಾರ್ಕಳ ನಗರ ಠಾಣೆ, ಕಾರ್ಕಳ ಇವರನ್ನು ದಸ್ತಗಿರಿ ಮಾಡಿ ಉಡುಪಿ ನ್ಯಾಯಾಲಯದಲ್ಲಿ ಒಪ್ಪಿಸಿದ್ದು ಈ ಪ್ರಕರಣವು ತನಿಖಾ ಹಂತದಲ್ಲಿದೆ.

ಉ) ಈ ಪ್ರಕರಣವು ತನಿಖಾ ಹಂತದಲ್ಲಿದೆ.

2098 (2064) ಶ್ರೀ ಜಯಪ್ರಕಾಶ್ ಹೆಗ್ಡೆ .ಕೆ (ಬ್ರಹ್ಮಾವರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅರಣ್ಯ ಭೂಮಿಯಲ್ಲಿ ಕಳೆದ 50–60 ವರ್ಷಗಳಿಂದ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದವರು ಪಟ್ಟಿಯಲ್ಲಿ ತಪ್ಪಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅರಣ್ಯ ಇಲಾಖೆಯವರು ಇವರನ್ನು ಒಕ್ಕಲೆಬ್ಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಕ್ರಮ, ಸಕ್ರಮ ಸಮಿತಿಯವರು ಸರ್ಕಾರಿ ಭೂಮಿಯ ಒತ್ತುವರಿಯ ದಾಖಲೆಗಳನ್ನು ಪರಿಶೀಲಿಸಿ ಮಂಜೂರಾತಿ ನೀಡಿದರೂ ಸಹ ಅರಣ್ಯ ಇಲಾಖೆಯವರು ಈ ಭೂಮಿಯು ಅರಣ್ಯ ಭೂಮಿ ಎಂದು ಒತ್ತುವರಿ ಮಂಜೂರಾತಿದಾರರ ಮೇಲೆ ಬಲವಂತದಿಂದ ಒಕ್ಕಲೆಬ್ಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) 27.4.1978ರ ಪೂರ್ವದಿಂದಲೂ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದವರ ಪಟ್ಟಿಯಲ್ಲಿ ಕೆಲವು ಅತಿಕ್ರಮಣ ಪ್ರಕರಣಗಳು ಬಿಟ್ಟು ಹೋಗಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಇಲ್ಲ.

ಆದಾಗ್ಯೂ ದಿನಾಂಕ: 27.4.1978 ರ ಪೂರ್ವಾದ ಯಾವುದೇ ಅರ್ಹ ಪ್ರಕರಣಗಳನ್ನು ಒಕ್ಕೆಲೆಬ್ಬಿಸಿರುವುದಿಲ್ಲ.

ಇ) ಅಕ್ರಮ,ಸಕ್ರಮ ಸಮಿತಿಯ ಅರಣ್ಯೇತರ ಜಮೀನುಗಳನ್ನು ಮಾತ್ರ ಮಂಜೂರು ಮಾಡಲು ಅವಕಾಶ ಹೊಂದಿರುತ್ತದೆ. ಸದರಿ ಅಕ್ರಮ-ಸಕ್ರಮ ಸಮಿತಿಯ ಅರಣ್ಯ ಜಮೀನು ಮಂಜೂರು ಮಾಡಿದ್ದಲ್ಲಿ ಅದು ಅನಿಯಮಿತ ಹಾಗೂ ಕಾನೂನು ಬಾಹಿರವಾಗಿರುತ್ತದೆ.

ಆದಾಗ್ಯೂ (ಈ ವಿಚಾರವನ್ನು ಅರಣ್ಯ ಇಲಾಖೆಯ ಗಮನಕ್ಕೆ ತಂದಲ್ಲಿ) ಅಕ್ರಮ-ಸಕ್ರಮ ಸಮಿತಿಯವರು 27.4.1978ರ ಪೂರ್ವಾದಲ್ಲಾದ ಅರ್ಹ ಪ್ರಕರಣಗಳನ್ನು ಮಂಜೂರು ಮಾಡಿದ್ದಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆಯಲು ಅರಣ್ಯ ಸಂರಕ್ಷಣಾ ಕಾಯಿದೆ 1980ರ ಅಡಿಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

2099 (2265) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ): ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರದೇಶಾಭೀವೃದ್ಧಿ ಮಂಡಳಿಗಳು ಯಾವುವು;

ಆ) ಈ ವಿವಿಧ ಮಂಡಳಿಗಳ ವ್ಯಾಪ್ತಿಗೆ ಬರುವ ತಾಲ್ಲೂಕುಗಳು ಯಾವುವು;

ಇ) ಕಳೆದ ಐದು ವರ್ಷಗಳಲ್ಲಿ ಇವುಗಳಿಗೆ ನಿಗದಿ ಮಾಡಿದ, ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ಹಣವೆಷ್ಟು;

ಈ) ಈ ಅಭಿವೃದ್ಧಿ ಮಂಡಳಿಗಳಿಗೆ ಪ್ರತಿ ವರ್ಷಕ್ಕೆ ಸಂಬಳ, ಸಾರಿಗೆ, ಭತ್ಯೆ, ಬಾಡಿಗೆ ಮತ್ತು ದೂರವಾಣಿ ಇತ್ಯಾದಿ ಖರ್ಚುಗಳಿಗೆ ಬೇಕಾಗುವ ಹಣ ಎಷ್ಟು (ಆಯಾ ಬಾಬ್ತುವಾರು ಮತ್ತು ಮಂಡಳಿವಾರು ವಿವರ ನಿಡುವುದು);

ಉ) ಈ ಮಂಡಳಿಗಳು ಕಾಮಗಾರಿ ಮಾಡಿದ ಕಂಟ್ರ್ಯಾಕ್ಟರ್‌ಗಳಿಗೆ ನೀಡಬೇಕಾಗಿರುವ ಬಾಕಿ ಮೊತ್ತವೆಷ್ಟು (ಮಂಡಳಿವಾರು ಮತ್ತು ವರ್ಷವಾರು ಮಾಹಿತಿ ನೀಡುವುದು);

ಊ) ಈ ಮಂಡಳಿಗಳು ಕೈಗೊಂಡ ಅಭಿವೃದ್ಧಿ ಕಾಮಗಾರಿಗಳಲ್ಲಿ ಅಪೂರ್ಣಗೊಂಡಿರುವುದು ಎಷ್ಟು; ಇವುಗಳನ್ನು ಪೂರ್ಣಗೊಳಿಸಲು ಬೇಕಾಗುವ ಮೊತ್ತವೆಷ್ಟು (ಮಂಡಳಿವಾರು ಮತ್ತು ಕಾಮಗಾರಿವಾರು ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು)

ಅ) 1) ಹೈದಾರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ

2) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ

3) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ

ಆ) ತಾಲ್ಲೂಕುಗಳ ಹೆಸರುಗಳನ್ನು ಅನುಬಂದ 1ರಲ್ಲಿ ನೀಡಲಾಗಿದೆ.

ಇ) ಅನುಬಂಧ 2ರಲ್ಲಿ ನೀಡಲಾಗಿದೆ.